KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

----------------------------------------------------------------------------

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

----------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No:2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಾಂತ | ಪ್ರಾ.ಸಾ.- 13 |
| ಗಂಡನ ಹೆಸರು | : | ರಂಗ | ಚಾ.ಸಾ.- 11 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸ ಸ್ಥಳ | : | ಮಠದ ಗದ್ದೆ | |

**ದಿನಾಂಕಃ 17-11-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. ಮೃತ ನಾಗರತ್ನ ನನ್ನ ಮಗಳು. ಈಗ್ಗೆ 5-6 ವರ್ಷಗಳ ಹಿಂದೆ ಈ ಪ್ರಕರಣದ ಮೃತೆ ಅಂದರೆ ನನ್ನ ಮಗಳು ಮತ್ತು ಆರೋಪಿ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು. ಅಲ್ಲಿ-ಇಲ್ಲಿ ಓಡಾಡಿಕೊಂಡಿದ್ದರು.

2. ಒಮ್ಮೆ ಆಕೆಯು ತನಗೆ ಹೊಟ್ಟೆ ನೋವು ಎಂದು ಹೇಳಿದಳು. ಆಕೆಗೆ ಏನೋ ತೊಂದರೆ ಇರಬಹುದು ಎಂದು ಹೇಳಿ ನಾವು ಆಕೆಯನ್ನು ಬಂಡಿಗಡಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ದೇವರ ಕಾರ್ಯ ಮುಗಿಸಿ ಮನೆಗೆ ಕರೆದುಕೊಂಡು ಬಂದೆವು. ಆದರೂ ಸಹಾ ಹೊಟ್ಟೆ ನೋವು ಕಡಿಮೆ ಆಗದೇ ಇದ್ದುದರಿಂದ ಜಯಪುರ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಜಯಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟು ಇಲ್ಲಿ ಆಗುವುದಿಲ್ಲವೆಂದು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು.

3. ನಂತರ ನಾವು ಆಕೆಯನ್ನು ಜಯಪುರ ಆಸ್ಪತ್ರೆಯಿಂದ ಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಕೊಪ್ಪ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ ನೋಡಲಾಗಿ ಆಕೆಯು 3 ತಿಂಗಳ ಗರ್ಭವತಿ ಎಂದು ತಿಳಿಯಿತು. ವೈದ್ಯರು ಅಬಾರ್ಷನ್ ಮಾಡಿಸುವಂತೆ ಹೇಳಿದರು.

4. ನಾನು ನನ್ನ ಮಗಳಲ್ಲಿ ಯಾಕೆ ಹೀಗೆ ಮಾಡಿಕೊಂಡೆ ಎಂದು ಕೇಳಲಾಗಿ, ನನ್ನ ಮಗಳು ಆರೋಪಿಯು ಆಕೆಗೆ ಗರ್ಭಪಾತ ಮಾಡಿಕೊಳ್ಳುವಂತೆ, ಮಾಡಿಕೊಳ್ಳದೇ ಇದ್ದಲ್ಲಿ ಊರಿನಲ್ಲಿ ಮರ್ಯಾದೆ ಹೋಗುತ್ತದೆ ಎಂದು ಹೇಳಿ, ಆಕೆಗೆ ಗರ್ಭಪಾತ ಆಗುವ ಮಾತ್ರೆ ತಂದುಕೊಟ್ಟನೆಂದು ತಿಳಿಸಿದಳು ಹಾಗೂ ಆಕೆ ತಾನು ಮಾತ್ರೆಯನ್ನು ಸೇವಿಸಿದ್ದಾಗಿ ತಿಳಿಸಿದಳು. ಕೊಪ್ಪ ವೈದ್ಯರಾದ ಬಾಲಕೃಷ್ಣರವರು ಆಕೆಗೆ ಚಿಕಿತ್ಸೆ ಕೊಟ್ಟರು ಮತ್ತು ನಮಗೆ ಆಕೆಗೆ ಇಲ್ಲಿ ಚಿಕಿತ್ಸೆ ಆಗುವುದಿಲ್ಲವೆಂದು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು.

5. ನನ್ನ ಮಗಳನ್ನು ಕೊಪ್ಪ ಆಸ್ಪತ್ರೆಯಿಂದ ಆಂಬುಲೆನ್ಸಿನಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೆಗ್ಗಾನ್ ಆಸ್ಪತ್ರೆಯಲ್ಲಿ ಆಕೆಯು 3 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾಳೆ. 3 ದಿನಗಳ ನಂತರ ಆಕೆಯು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ. ನನ್ನ ಮಗಳು ಆರೋಪಿಯು ತಂದು ಕೊಟ್ಟ ಗರ್ಭಪಾತ ಮಾತ್ರೆ ತಿಂದಿದ್ದರಿಂದಾಗಿ ಮರಣ ಹೊಂದಿದ್ದಾಳೆ. ಈ ಬಗ್ಗೆ ನನ್ನ ತಮ್ಮ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತಾನೆ.

6. ನನ್ನ ತಮ್ಮ ದೂರನ್ನು ಕೊಟ್ಟ ನಂತರ ಪೊಲೀಸರು ನಮ್ಮ ಮನೆಯ ಬಳಿ ಬಂದಿದ್ದರು. ನಮ್ಮನ್ನು ಹೇಗಾಯಿತು, ಏನಾಯಿತು ಎಂಬ ಬಗ್ಗೆ ವಿಚಾರಿಸಿದರು ಹಾಗೂ ಮಹಜರ್ ಕ್ರಮ ಜರುಗಿಸಿದರು, ಮಹಜರಿಗೆ ನಾನು ನನ್ನ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಪೊಲೀಸರು ಮಹಜರ್ ಮಾಡಲು ಬಂದಾಗ ನಮ್ಮ ಅಕ್ಕಪಕ್ಕದವರೂ ಸಹಾ ಇದ್ದರು, ಮಹಜರಿಗೆ ನನ್ನ ಸಣ್ಣ ಮಗಳು ಸಹಿ ಮಾಡಿದ್ದಾಳೆ.

7. ನಿ.ಪಿ.9 ಎಂದು ಗುರುತಿಸಲಾದ ಫೋಟೋದಲ್ಲಿ ಸಾಕ್ಷಿಯು ತನ್ನ ಭಾವಚಿತ್ರ ಇರುವುದಾಗಿ ಹಾಗೂ ಶ್ರೀನಿವಾಸ, ಶಿವಮೂರ್ತಿ ಎನ್ನುವವರ ಭಾವಚಿತ್ರ ಸಹಾ ಇರುವುದಾಗಿ ಗುರುತಿಸಿರುತ್ತಾರೆ.

8. ಆರೋಪಿಯನ್ನು ನಾನು ನೋಡಿದ್ದೇನೆ. ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾನೆ.

9. ನಿ.ಪಿ.2 ರ ಫೋಟೋದಲ್ಲಿ ಇರುವ ಶವ ನನ್ನ ಮಗಳದ್ದು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.(ಕಣ್ಣೀರು ಹಾಕುತ್ತಾ ಸಾಕ್ಷಿ ನುಡಿದಿರುತ್ತಾರೆ).

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್.ಟಿ. ವಕೀಲರಿಂದಃ**

10. ನನ್ನ ಮಗಳು ಈ ಘಟನೆಗಿಂತ 2/3 ವರ್ಷಗಳ ಹಿಂದೆ ಮಂಗಳೂರಿನ ಕಂಪನಿ

ಕೆಲಸಕ್ಕೆ ಹೋಗಿದ್ದಳು. ಯಾವ ಕಂಪನಿ, ಏನು ಕೆಲಸ ಎಂದು ನನಗೆ ಗೊತ್ತಿಲ್ಲ. ಕಂಪನಿಯಿಂದ ವಸತಿ ಗೃಹ ಕೊಟ್ಟಿದ್ದು, ಸದರಿ ವಸತಿ ಗೃಹದಲ್ಲಿ ಆಕೆಯ ಸ್ನೇಹಿತೆಯರ ಜೊತೆ ಉಳಿದುಕೊಂಡಿದ್ದಳು. ಆಕೆಯ ಸ್ನೇಹಿತರು ಯಾರು-ಯಾರೆಂದು ಅವರ ಹೆಸರು ನನಗೆ ಗೊತ್ತಿಲ್ಲ.

11. ನನ್ನ ಮಗಳು ನಮ್ಮ ಊರಿಗೆ ವರ್ಷಕ್ಕೆ 2/3 ಬಾರಿ ಬರುತ್ತಿದ್ದಳು. ಸಾಕ್ಷಿಯು ಮುಂದುವರಿದು ಸ್ವತಃ ನುಡಿದಿದ್ದಾರೆ ಆ ರೀತಿ ಬಂದಾಗ ವಾರ / 15 ದಿನ ಇರುತ್ತಿದ್ದಳು.ಈ ಘಟನೆ ಸಂದರ್ಭದಲ್ಲಿ ನನ್ನ ಮಗಳು ಹಬ್ಬಕ್ಕೆಂದು ನಮ್ಮ ಊರಿಗೆ ಬಂದಿದ್ದಳು. ಹಬ್ಬಕ್ಕೆ ಎಂದು ಬಂದಿದ್ದ ದಿವಸಕ್ಕೆ 6 ತಿಂಗಳ ಹಿಂದೆಯೂ ಸಹಾ ಒಮ್ಮೆ ಬಂದಿದ್ದಳು.

12. ನನ್ನ ಮಗಳು ಕಂಪನಿಗೆ ರಜೆ ಇದ್ದಲ್ಲಿ ಮಂಗಳೂರಿನಲ್ಲಿರುವ ನನ್ನ ತಂಗಿ ಮನೆಗೂ ಹೋಗಿ ಬರುತ್ತಿದ್ದಳು. ಕಂಪನಿ ಕೆಲಸ ಮುಗಿದ ನಂತರ ಕೆಲಸಗಾರರು ಎಲ್ಲಿಗಾದರೂ ಓಡಾಡಬಾರದು ಎಂದು ನಿರ್ಬಂಧನೆ ಇರಲಿಲ್ಲ ಎಂದರೆ ಸರಿ.

13. ನನ್ನ ಮಗಳು ಹೊಟ್ಟೆ ನೋವಿಗೆ ನಮ್ಮ ಬಳಿ ಯಾವುದೇ ಕಾರಣ ಹೇಳಿರಲಿಲ್ಲ. ಜಯಪುರ ಆಸ್ಪತ್ರೆಯಲ್ಲಿ ಆಕೆಗೆ ಇಂಜೆಕ್ಷನ್ ಮತ್ತು ಮಾತ್ರೆ ಕೊಟ್ಟಿದ್ದರು. ಜಯಪುರ ಆಸ್ಪತ್ರೆಯಲ್ಲಿ ಸ್ವಲ್ಪ ರಕ್ತಸ್ರಾವ ಆಗಿತ್ತು, ಜಯಪುರ ಆಸ್ಪತ್ರೆಯಲ್ಲಿ ಆಗುವುದಿಲ್ಲವೆಂದು ಕೊಪ್ಪ ಆಸ್ಪತ್ರೆಗೆ ಕಳುಹಿಸಿದರು.

14. ಕೊಪ್ಪ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಆಗಿದ್ದು, ನನ್ನ ಮಗಳನ್ನು ಆಸ್ಪತ್ರೆಗೆ ಸೇರಿಸುವಾಗ ಚಿಕಿತ್ಸಾ ಚೀಟಿಯನ್ನು ಬರೆಸಿದ್ದವು ಮತ್ತು ರಿಜಿಸ್ಟರ್ ನಲ್ಲಿಯೂ ಸಹಾ ನಮೂದಿಸಿದ್ದರು. ಕೊಪ್ಪ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿ ಆಕೆಯು 3 ತಿಂಗಳ ಗರ್ಭವತಿ ಎಂದು ತಿಳಿಸಿದ್ದರು. ಬಾಲಕೃಷ್ಣ ವೈದ್ಯರು ಗರ್ಭಪಾತ ಮಾಡಿಸಬೇಕೆಂದು ಹೇಳಿದರು. ಗರ್ಭಪಾತ ಮಾಡಿಸಲು ನನ್ನ ಮತ್ತು ನನ್ನ ಮಗಳ ಒಪ್ಪಿಗೆ ಸಹಿ ಪಡೆದರು.

ಅದಾದ ನಂತರ ಆಕೆಯನ್ನು ಹೆರಿಗೆ ವಾರ್ಡಿಗೆ ಕರೆದುಕೊಂಡು ಹೋದರು.

15. ಹೆರಿಗೆ ವಾರ್ಡಿನಲ್ಲಿ ಆಕೆಗೆ ಡ್ರಿಪ್ ಹಾಕಿ, ಇಂಜೆಕ್ಷನ್ ಕೊಟ್ಟರು ಎಂದರೆ ಸರಿ. ಅಲ್ಲಿ ಇಬ್ಬರು ಮಹಿಳಾ ನರ್ಸ್ ಗಳು ಇದ್ದರು. ಆ ರಾತ್ರಿ ನನ್ನ ಮಗಳಿಗೆ ಹೆಚ್ಚಿನ ರಕ್ತ ಸ್ರಾವ ವಾಗುತ್ತಿದ್ದು, ರಕ್ತ ಕೊಡಬೇಕೆಂದು ನರ್ಸ್ ಆಗಲೀ ವೈದ್ಯರಾಗಲೀ ನನಗೆ ತಿಳಿಸಿಲ್ಲ ಹಾಗೂ ಆಕೆಗೆ ರಕ್ತವನ್ನು ಸಹಾ ಕೊಟ್ಟಿಲ್ಲ. ಕೊಪ್ಪ ಆಸ್ಪತ್ರೆಯಿಂದ ಮರುದಿನ ಡಿಸ್ಚಾರ್ಜ್ ಮಾಡಿಸಿಕೊಂಡು ಸಂಜೆ 6.00 ಗಂಟೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋದೆವು. ಮೆಗ್ಗಾನ್ ಆಸ್ಪತ್ರೆಗೆ ಹೋಗುವಾಗ ಆಕೆಯು ಚೆನ್ನಾಗಿಯೇ ಇದ್ದಳು.

16. ಆಕೆಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ಯಾವಾಗ ಸೀರಿಯಸ್ ಆಯಿತೆಂದು ನ್ಯಾಯಾಲಯ ನನಗೆ ಗೊತ್ತಿಲ್ಲ. ಕೊಪ್ಪದಲ್ಲಿ ನನ್ನ ಮಗಳು ಚೆನ್ನಾಗಿದ್ದರೂ ಸಹಾ ಶಿವಮೊಗ್ಗ ಆಸ್ಪತ್ರೆಗೆ ಯಾಕೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿಯು ಬಾಲಕೃಷ್ಣ ವೈದ್ಯರು ಇಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಎಂದು ಹೇಳಿರುತ್ತಾರೆ.

17. ನನ್ನ ಮಗಳು ಮಂಗಳೂರಿನಿಂದ ನಮ್ಮ ಊರಿಗೆ ಬಂದ ಮರು ದಿನ ನಾವು ದೇವಸ್ಥಾನಕ್ಕೆ ಹೋಗಿದ್ದು, ದೇವಸ್ಥಾನದಿಂದ ಬಂದ ಮರು ದಿನ ಆಕೆಗೆ ಹೊಟ್ಟೆ ನೋವು ಜಾಸ್ತಿಯಾಗಿರುತ್ತದೆ.

18. ಕೊಪ್ಪ ಆಸ್ಪತ್ರೆಯಿಂದ ನನ್ನ ಮಗಳನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಆಂಬುಲೆನ್ಸಿನಲ್ಲಿ ಕಳುಹಿಸಿಕೊಟ್ಟರು ಎಂದರೆ ಸರಿ.ಹಾಗೆ ಕಳುಹಿಸಿಕೊಡುವಾಗ ಆಕೆಯು ನಿತ್ರಾಣಗೊಂಡಿದ್ದಳು, ಸುಸ್ತಾಗಿದ್ದಳು, ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ.

19. ನಾನು ಕೊಪ್ಪ ಆಸ್ಪತ್ರೆಗೆ ಹೋದಾಗಲೇ ನನ್ನ ಮಗಳು ಶ್ರೀರಾಜ್ ಅಂದರೆ ಆರೋಪಿಯಿಂದ ಗರ್ಭಿಣಿಯಾಗಿದ್ದಾಳೆಂದು ತಿಳಿಯಿತು. ಬಾಲಕೃಷ್ಣ ವೈದ್ಯರು ನನ್ನ ಮಗಳು ಗರ್ಭಪಾತದ ಮಾತ್ರೆ ನುಂಗಿದ್ದರಿಂದ ಗರ್ಭಪಾತ ಆಗಿದೆ ಎಂದು ಮೊದಲಿಗೆ ತಿಳಿಸಿದ್ದರು. ನಂತರ ನಾನು ಮಗಳನ್ನು ವಿಚಾರಿಸಿದಾಗ, ಮಗಳೂ ಸಹಾ ಅದನ್ನೇ ಹೇಳಿದಳು.

20. ಮಾತ್ರೆ ಯಾವುದೆಂದು ನನಗೆ ಓದಲು ಬರದಿದ್ದರಿಂದ ಹೇಳಲು ಗೊತ್ತಾಗುವುದಿಲ್ಲ. ಕೊಪ್ಪ ಆಸ್ಪತ್ರೆಯಲ್ಲಿ ಗರ್ಭಪಾತ ಆಗಿದ್ದು, ಮಗುವನ್ನು ನಮಗೆ ತೋರಿಸಿದ್ದರು. ಸದರಿ ಮಗುವನ್ನು ಮಣ್ಣು ಮಾಡುವಂತೆ ನಮಗೆ ತಿಳಿಸಿದ್ದು, ಆದರೆ ನಾವು ಮಾಡಲ್ಲವೆಂದು ಅಲ್ಲಿಯೇ ಬಿಟ್ಟು ಬಂದೆವು.

21. ನನ್ನ ಮಗಳು ಆರೋಪಿಯೊಂದಿಗೆ ಮಾತನಾಡುತ್ತಿದ್ದುದು, ತಿರುಗಾಡುತ್ತಿದ್ದುದು ಆಕೆಯ ಮೊಬೈಲ್ ನಲ್ಲಿ ಇತ್ತು. ಸದರಿ ಮೊಬೈಲನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದಾರೆ.

22. ಆರೋಪಿಯು ನನ್ನ ಮಗಳ ಗರ್ಭಕ್ಕೆ ಕಾರಣನಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಗರ್ಭಪಾತಕ್ಕೆ ಆರೋಪಿಯು ಮಾತ್ರೆ ತಂದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಮಾತ್ರೆ ಕೊಟ್ಟಿದ್ದನ್ನು ನಾವು ನೋಡಿಲ್ಲ. ಸಾಕ್ಷಿಯು ಮುಂದುವರಿದು ಆರೋಪಿಯೇ ಮಾತ್ರೆ ಕೊಟ್ಟಿದ್ದಾಗಿ ಹೇಳಿದ್ದಳು ಎಂದು ಹೇಳುತ್ತಾರೆ.

23. ಕೊಪ್ಪ ಆಸ್ಪತ್ರೆಯಲ್ಲಿ ಈ ವಿಚಾರವನ್ನು ಪೊಲೀಸರಿಗೆ ನಾನು ತಿಳಿಸಿಲ್ಲ. ಸಾಕ್ಷಿಯು ಮುಂದುವರಿದು ಕಾರಣ ನಾನು ಗಾಬರಿಯಲ್ಲಿದ್ದೆ ಎಂದು ಹೇಳುತ್ತಾರೆ.

24. ನನ್ನ ಮಗಳು ಸತ್ತ ದಿವಸವೇ ಪೊಲೀಸರು ನನ್ನ ಮನೆಗೆ ಬಂದು, ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಆ ದಿನದ ಹೊರತಾಗಿ ಬೇರೆ ದಿನ ಪೊಲೀಸರು ನಮ್ಮ ಮನೆಗೆ

ಬಂದಿಲ್ಲ. ನಾನು ಹೆಬ್ಬೆಟ್ಟಿನ ಗುರುತು ಹಾಕಿದ ದಾಖಲೆ (ನಿ.ಪಿ.8) ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಕೊಪ್ಪ ವೈದ್ಯರು ಹೇಳಿಕೊಟ್ಟಂತೆ ನನ್ನ ತಮ್ಮ ಫಿರ್ಯಾದು ಕೊಟ್ಟಿದ್ದು, ಆ ಪ್ರಕಾರವೇ ನಾನು ಸಾಕ್ಷ್ಯ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-17-11-2025

(ರಾಜೇಶ್ವರಿ ಎನ್ ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS